### ನಾಳಿನ ‘ನಾಯಕಿ’ಯರು

‘ಬೆಂಕಿಯಲ್ಲಿ ಅರಳಿದ ಜಾಣ ಸಾಧಕಿಯರು’ (ಮಾ. 21, ನೇಮಿಚಂದ್ರ) ಮುಖಪುಟ ಲೇಖನ ಓದಿ ಕಣ್ಣು ತುಂಬಿಬಂತು. ಮಕ್ಕಳ ಕೌಟುಂಬಿಕ ಪರಿಸ್ಥಿತಿ ಕಂಡು ತುಂಬಾ ನೋವಾಯಿತು. ಅಂಥ ಪರಿಸ್ಥಿತಿಯಲ್ಲೂ ಮಕ್ಕಳ ಓದುವ ಹಂಬಲಕ್ಕೆ ದೊಡ್ಡ ಸಲಾಂ. ನಾಳಿನ ನಾಯಕಿಯರಾಗಿ ಎಲ್ಲರಿಗೂ ಅವರು ದಾರಿ ದೀಪವಾಗಲಿ ಎಂದು ಹರಸೋಣ. ಆ ಮಕ್ಕಳಿಗೆ ಬೆನ್ನೆಲುಬಾಗಿ ನಿಂತ ಎಲ್ಲ ಚೇತನಗಳಿಗೆ ನಮಸ್ಕಾರ.

—ಪ್ರಫುಲ್ಲ ಚಂದನ್

### ಅತ್ಯುನ್ನತ ಮಾದರಿಗಳು

ನೇಮಿಚಂದ್ರ ಅವರ ಲೇಖನ ಓದಿ ಹೃದಯ ತುಂಬಿ ಬಂತು. ಭೀಮಾಬಾಯಿ, ಯಲ್ಲಮ್ಮನ ಬಗ್ಗೆ ಓದುತ್ತಾ ಭಾವುಕನಾಗಿಬಿಟ್ಟೆ. ಈ ಮಕ್ಕಳ ಶಿಕ್ಷಣಕ್ಕೆ ನೆರವಾದವರು ಮಾನವೀಯತೆಯ ಅತ್ಯುನ್ನತ ಮಾದರಿಗಳು. ಕಡುಬಡತನದಲ್ಲಿ ಅರಳುತ್ತಿರುವ ಮಕ್ಕಳ ಭವಿಷ್ಯ ಉಜ್ವಲವಾಗಲಿ.

– ವಿನೋದ್ ಮಹದೇವಪುರ

### ಅಸಹಾಯಕ ಬದುಕುಗಳು ಅರಳಲಿ

ಅರ್ಥಗರ್ಭಿತ ಲೇಖನ. ಭೀಮಾಬಾಯಿ ಮತ್ತು ಯಲ್ಲಮ್ಮ ಅವರ ಜೀವನಗಾಥೆ ಇನ್ನು ಮುಂದೆ ಸುಂದರವಾಗಿರಲಿ. ಕಠಿಣ ಬದುಕು ನೂರು ಪಾಠ ಕಲಿಸುತ್ತದೆ. ಬದುಕನ್ನು



ಬೆಂಕಿಯಲ್ಲಿ ಅರಳಿದ ಜಾಣ ಸಾಧಕಿಯರು

ಸವಾಲಾಗಿ ಸ್ವೀಕರಿಸಿದ ಇಂತಹ ಮಕ್ಕಳಿಗೆ ಆಸರೆ, ಮಾರ್ಗದರ್ಶಕರಾಗಿರುವ, ನೋವಿಗೆ ಮಿಡಿಯುವ ಮಹೇಶ್ ಮತ್ತು ಜಮೀಲಾ ಮೇಡಂ ಅಂಥವರು ಸಮಾಜದಲ್ಲಿ ಮತ್ತಷ್ಟು ಹೆಚ್ಚಲಿ. ಅಸಹಾಯಕ ಬದುಕುಗಳು ಅರಳಲಿ.

—ಎಸ್. ವಿಶ್ವನಾಥ ಐನಹಳ್ಳಿ, ಮೈಸೂರು

### ಇಂಥ ಪ್ರಯತ್ನ ಇನ್ನಷ್ಟು ನಡೆಯಲಿ

ವಲಸೆ ಕಾರ್ಮಿಕರ ಹೆಣ್ಣು ಮಕ್ಕಳ ಕಥನ ಮನಮುಟ್ಟುವಂತಿದೆ. ಇಂಥ ಎಷ್ಟೋ ಹೆಣ್ಣುಮಕ್ಕಳು ಲೆಕ್ಕವಿಲ್ಲದಷ್ಟು ಕೌಟುಂಬಿಕ ಕಷ್ಟಗಳ ನಡುವೆಯೂ ಶಿಕ್ಷಣದಲ್ಲಿ ಮೇಲುಗೈ ಸಾಧಿಸಿದ್ದಾರೆ. ಮಹೇಶ್, ಶಿಕ್ಷಕಿ ಜಮೀಲಾ ಅವರ ಪ್ರಯತ್ನವನ್ನೂ ಗುರುತಿಸಬೇಕು. ಇಂಥ ಪ್ರಯತ್ನಗಳು ಇನ್ನಷ್ಟು ನಡೆಯಬೇಕು.

—ನರಹರಿ ಕೆ.ವಿ.

### ಸಹಾಯಹಸ್ತ ದೊರೆಯಲಿ

ವಿದ್ಯೆ ಯಾರ ಮನೆಯ ಸ್ವತ್ತಲ್ಲ ಎಂಬುದನ್ನು ಈ ಲೇಖನ ಮತ್ತಷ್ಟು ಮನದಟ್ಟು ಮಾಡಿತು. ಕಷ್ಟ ಕೋಟಲೆಗಳನ್ನು ಸಹಿಸಿಕೊಂಡು, ಎಲ್ಲೂ ತಮ್ಮ ಏಕಾಗ್ರತೆ ಕಳೆದುಕೊಳ್ಳದೆ ಮುಂದಡಿ ಇಟ್ಟಿರುವ ಈ ಹೆಣ್ಣು ಮಕ್ಕಳಿಗೆ ಸರ್ಕಾರ ಹಾಗೂ ಬೇರೆ ಸಂಘ, ಸಂಸ್ಥೆಗಳು ಸಹಾಯ ಮಾಡಬೇಕು.

—ಕವಿತಾ ಅಶೋಕ್, ನೆಲಮಂಗಲ

### ಸಾಹಸಜೀವಿಗಳು

ವಲಸೆ ಕಾರ್ಮಿಕ ಹೆಣ್ಣುಮಕ್ಕಳು ಸಾಹಸಗಾಥೆ ಓದುತ್ತಿದ್ದಂತೆ ಗಂಟಲು ಕಟ್ಟಿಬಂತು. ಈ ಕಷ್ಟಜೀವಿಗಳು, ಸಾಹಸಜೀವಿಗಳು ತಮ್ಮ ಜೀವನವನ್ನಷ್ಟೇ ಅಲ್ಲ ದೇಶ ಕಟ್ಟುವ ಹುರಿಯಾಳುಗಳು ಕೂಡ ಆಗಿದ್ದಾರೆ ಅನಿಸಿತು.

—ಶ್ರೀಧರ ಪಿಸ್ಸೆ

### ಸಂವೇದನೆ ಮೂಡಲಿ

ಸಂವೇದನೆಗೆ ಪ್ರೇರಣೆಯಾಗುವ ಲೇಖನ. ಈ ಮಕ್ಕಳೊಂದಿಗೆ, ಮಹೇಶ್, ಜಮೀಲಾ ಮೇಡಂ, ರಾಜೇಶ್ವರಿ ಇವರೆಲ್ಲರೂ ಅಭಿನಂದನೀಯರು. ಯಾದಗಿರಿ, ರಾಯಚೂರು, ಸಿರವಾರ, ಕಲಬುರಗಿ, ದೇವದುರ್ಗದಿಂದಲೇ ಬೆಂಗಳೂರಿಗೆ ವಲಸೆ ಜಾಸ್ತಿ. ಈ ಪ್ರದೇಶಗಳು ಈಗ್ಗೆ 60–70 ವರ್ಷದಿಂದಲೂ ಇದೇ ದುರ್ದೆಸೆ ಅವಸ್ಥೆಯಲ್ಲಿವೆ. ಸರ್ಕಾರ ಈ ಬಗ್ಗೆ ಚಿಂತಿಸುವ ಅಗತ್ಯವಿದೆ.

—ಬಿ.ಎನ್.ಕೆ. ಘಂಟಿ

### ಪುಟ್ಟ ಹಳ್ಳಿಯ ಅಪೂರ್ವ ಚೆಲುವು

‘ಹಾಲ್‌ಸ್ಟಾಟ್; ಅಸೀಮ ಸೌಂದರ್ಯದ ಹಳ್ಳಿ’ (ಮಾ. 21, ಎಸ್.ಪಿ. ವಿಜಯಲಕ್ಷ್ಮಿ) ಪ್ರವಾಸ ಲೇಖನ ಬಹಳ ಸುಂದರವಾಗಿದೆ. ಓದುತ್ತಲೇ ಹಾಲ್‌ಸ್ಟಾಟ್ ಸೌಂದರ್ಯವನ್ನು ಮನ ತುಂಬಿಕೊಂಡೆ. ಆ ಪುಟ್ಟ ಹಳ್ಳಿಯ ಚೆಲುವಿನ ವರ್ಣನೆ, ಪದಗಳ ಆಯ್ಕೆ, ಆ ಹಳ್ಳಿಯ ಅದ್ಭುತ ಚಿತ್ರಗಳು ನಿಜಕ್ಕೂ ಹಾಲ್‌ಸ್ಟಾಟ್ ಮಾಯಾಲೋಕ ಎಂಬುದನ್ನು ತೋರುವಂತಿದ್ದವು. ಲೇಖನ, ಪ್ರಕೃತಿ ಸೌಂದರ್ಯದ ಸವಿಯನ್ನು ಉಣಬಡಿಸಿತು.

—ಚಿನ್ಮಯಿ ಎಸ್., ಚಿತ್ರದುರ್ಗ



### ಅಪರೂಪದ ಸರಣಿ

‘ಮರಗಳ ಕಥೆ’ ಹೆಸರಿನಲ್ಲಿ ವಿನು ಗಂಗೆ ಅವರು ಮರಗಳ ಪರಿಚಯ ಮಾಡುತ್ತಿರುವುದು ಅಪರೂಪದ, ಉಪಯುಕ್ತ ಕಾರ್ಯ. ಈಚೆಗೆ ‘ಕಾಡುಕಣಗಿಲೆ’ ಲೇಖನ ಓದಿದೆ. ಮರಗಳ ಕುರಿತ ಅವರ ಜ್ಞಾನ ಮೆಚ್ಚುವಂಥದ್ದು.

—ಸುಜಾತಾ ಗಣೇಶ್

### ಹೀಗೊಂದು ಆಲೋಚನೆ!

‘ನೀರ ಬಿಟ್ಟು ನೆಲದ ಮೇಲೆ ದೋಣಿ ಸಾಗಿತು!’ (ಮಾ.21, ಜಿ. ನಾಗೇಂದ್ರ ಕಾವೂರು) ಲೇಖನ, ಉಭಯಚರ ವಾಹನದ ಪರಿಚಯ ಮಾಡಿಸಿತು. ಇದನ್ನು ಓದುತ್ತಿದ್ದಂತೆ, ನಮ್ಮ ಬೆಂಗಳೂರಿಗೂ ಇದರ ಅವಶ್ಯಕತೆ ಇದೆ ಎಂಬ ಆಲೋಚನೆಯೂ ಬಂತು. ಆಗಾಗ್ಗೆ ಹೆಚ್ಚಿನ ಮಳೆಯಿಂದಾಗಿ ರಾಜ ಕಾಲುವೆ ಇಲ್ಲದೆ ರಸ್ತೆಯಲ್ಲಿ ಹರಿಯುವ ನೀರಿನಿಂದ ಸಂಚಾರಕ್ಕೆ ತೊಂದರೆ ಆದಾಗ ಉಭಯಚರ ವಾಹನ ಉಪಯುಕ್ತ ಅಲ್ಲವೇ?

—ಅನುರಾಧಾ ಟಿ., ದಾವಣಗೆರೆ



### ‘ಅಲೊವೆರಾ’ ಎಂಬ ಅದ್ಭುತ

‘ಅಲೊವೆರಾ; ಜಗ್ಗದ, ಬಗ್ಗದ ಸಸ್ಯಕುಲ’ (ಮಾ. 21, ಸೀಮಾ ಹೆಗಡೆ) ಲೇಖನ ಚೆನ್ನಾಗಿತ್ತು. ಅಲೊವೆರಾ ಅದ್ಭುತ ಸಸ್ಯ. ಇದರ ವಿವರಣೆ ಸೊಗಸಾಗಿದೆ. ಚರ್ಮ ರಕ್ಷಣೆಗೆ ಬಳಕೆಯಾಗುವ ಬಹುಪಾಲು ಕ್ರೀಮ್‌ಗಳಲ್ಲಿ ಈ ಸಸ್ಯದ್ದೇ ಸಿಂಹಪಾಲು. ಬೇರೆ ಗಿಡಗಳ ಕಡ್ಡಿಗಳಿಂದ ಗಿಡ ಮಾಡಲು ಇದರ ಲೋಳೆ ಬಳಸುತ್ತಾರೆ. ಅದರಲ್ಲಿ ಕಡ್ಡಿ ಬೇರು ಬಿಡಲು ಅವಶ್ಯಕವಾದ ರಸದೂತಗಳ ಪ್ರಮಾಣ ಹೆಚ್ಚಿರುವುದೇ ಕಾರಣ. ಇಂತಹ ಲೇಖನಗಳು ಹೆಚ್ಚು ಮೂಡಿಬರಲಿ.

—ಡಾ. ಎಸ್. ಶಿಶುಪಾಲ, ದಾವಣಗೆರೆ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in